

ಸ್ಟೀವ್ ಬಿರೊ

# ವಿಶ್ವ ಸೆಳೆದ ಬ್ರೂಸ್

■ **ಶಶಿಕುಮಾರ್ ಸಿ.**

ಪ್ಯಾರಿಸ್‌ನ 12ನೇ ಶತಮಾನದ ಐತಿಹಾಸಿಕ ನಾಟ್ರೆ ಡೇಮ್ ಚರ್ಚ್ ಈಚೆಗಷ್ಟೇ ಬೆಂಕಿಗಾಹುತಿಯಾಗಿತ್ತು. ಆ ಅನಾಹುತಕ್ಕೂ ಒಂದು ತಾಸು ಮುನ್ನ ಪ್ರವಾಸಿಗರೊಬ್ಬರು ತೆಗೆದ ಫೋಟೊ ಜಗತ್ತಿನಾದ್ಯಂತ ಸುದ್ದಿಯಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

ಅದರ ನೆನಪು ಮಾಸುವ ಮುನ್ನವೇ ಛಾಯಾಚಿತ್ರ ಕ್ಷೇತ್ರದಲ್ಲಿ ಮತ್ತೊಂದು ಫೋಟೊ ಎಲ್ಲರ ಹುಬ್ಬೇರುವಂತೆ ಮಾಡಿದೆ. ಕ್ಷಣಕಾಲ ನಿಂತು ಈ ಚಿತ್ರದ ಸೌಂದರ್ಯ ಸವಿಯುವಂತೆ ಮಾಡಿದೆ. ಒಂದೇ ನೋಟದಲ್ಲೇ ಎಲ್ಲರ ಗಮನ ಸೆಳೆದಿದೆ. ಯಾರಪ್ಪ ಈ ಅದ್ಭುತ ಫೋಟೊ ಸೆರೆಹಿಡಿದಾತ ಎಂದುಕೊಳ್ಳುವಂತೆ ಮಾಡಿದೆ.

ಅಂದಹಾಗೆ, ಕಳೆದ ಬಾರಿ ವೈರಲ್ ಆಗಿದ್ದ ಛಾಯಾಚಿತ್ರದ ದುರಂತ ನಾಯಕ ಚರ್ಚ್ ಆಗಿದ್ದರೆ ಈ ಬಾರಿಯ ನಾಯಕ ರಣಹದ್ದು.

ಸ್ಟೀವ್ ಬಿರೊ ಎಂಬ ಫೋಟೋಗ್ರಾಫರ್ 'ಕೆನಡಿಯನ್ ರ‍್ಯಾಪ್ಟರ್ ಕನ್ಸರ್ವೇಷನ್'ನಲ್ಲಿ (ಕೆನಡಾದ ರಣಹದ್ದುಗಳ ಸಂರಕ್ಷಣಾಲಯ) ತನ್ನ ಎರಡು ರೆಕ್ಕೆಗಳ ತುದಿಯನ್ನು ನೀರಿಗೆ ತಾಗಿಸಿ ಕ್ಯಾಮೆರಾವನ್ನು ದಿಟ್ಟಿಸಿ ನೋಡುವ 'ಬ್ರೂಸ್' ಹೆಸರಿನ ರಣಹದ್ದುವಿನ ಚಿತ್ರವನ್ನು ಈಚೆಗೆ ಸೆರೆಹಿಡಿದಿದ್ದರು. 'ಆಗಲೇ ಈ ಚಿತ್ರ ಅದ್ಭುತವಾದದ್ದು ಎನಿಸಿತ್ತು. ಆದರೆ, ಇಷ್ಟೊಂದು ಪ್ರಮಾಣದ ಹೊಗಳಿಕೆ, ಮೆಚ್ಚುಗೆ ಸಿಗುತ್ತ' ಎಂದು ಸ್ಟೀವ್ ಭಾವಿಸಿರಲಿಲ್ಲವಂತೆ. ಚಿತ್ರವನ್ನು ತನ್ನ ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಖಾತೆಯಲ್ಲಿ ಅವರು ಹಂಚಿಕೊಂಡಿದ್ದರು. ಅದು ಈಗ ವಿಶ್ವದೆಲ್ಲೆಡೆ ವೈರಲ್ ಆಗಿದ್ದು, ಚರ್ಚೆಗೆ ಗ್ರಾಸವಾಗಿದೆ.

ಫೋಟೊ ಸೆರೆಹಿಡಿದ ಕ್ಷಣದ ಬಗ್ಗೆ ಸ್ಟೀವ್ ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿದ್ದು ಹೀಗೆ... 'ಕ್ಯಾಮೆರಾ ಹಿಡಿದು ಇತರ ಫೋಟೊಗ್ರಾಫರ್‌ಗಳ ಜೊತೆಗೆ ಕೆನಡಿಯನ್ ರ‍್ಯಾಪ್ಟರ್ ಕನ್ಸರ್ವೇಷನ್‌ನ ಕೊಳವೊಂದರ ಬಳಿಗೆ ಅಂದು ಹೋಗಿದ್ದೆ. ಕೊಳದ ಮತ್ತೊಂದು ಬದಿಯಲ್ಲಿ 'ಬ್ರೂಸ್' ಕೂತಿತ್ತು. ಅದು ಹಾರುವ ಸಮಯಕ್ಕಾಗಿಯೇ ಕಾದು ವಿರುದ್ಧ ದಿಕ್ಕಿನಲ್ಲಿ ಕೂತಿದ್ದೆ. ಗರಿಬಿಚ್ಚಿ ಹಾರಿದ ಅದು ಕ್ಷಣಾರ್ಧದಲ್ಲೇ ತನ್ನ ದೃಷ್ಟಿಯನ್ನು ನೇರವಾಗಿ ಕ್ಯಾಮೆರಾದತ್ತ ದಿಟ್ಟಿಸಿ, ಎರಡೂ ಗರಿಗಳ ತುದಿಯನ್ನು ಒಂದೇ ವೇಳೆ ನೀರಿಗೆ ತಾಗಿಸಿತು. ಆಗಲೇ ಕ್ಲಿಕ್ಕಿಸಿದೆ'.

'ಫೋಟೊ ಸೆರೆಹಿಡಿದ ಕೆಲ ಕ್ಷಣಗಳಲ್ಲಿಯೇ ಅದು ನಾನು ಕೂತಿದ್ದ ಸ್ಥಳದತ್ತ ಧಾವಿಸಿ, ನನ್ನ ತಲೆಗೆ ಕೆಲವೇ ಇಂಚು ದೂರದಲ್ಲಿ ರೆಕ್ಕೆ ಬಡಿದು ಸಾಗಿತು. ಆ ಕ್ಷಣವಂತೂ ಅದ್ಭುತ ಅನುಭವವಾಗಿತ್ತು' ಎಂದು ಫೇಸ್‌ಬುಕ್‌ನಲ್ಲೂ ಬರೆದುಕೊಂಡಿದ್ದಾರೆ. ಅದಕ್ಕೆ ಸಾಕ್ಷಿಯೆಂಬಂತೆ 'ಬ್ರೂಸ್' ಹಾರಿಬಂದ ವಿಡಿಯೊ ಹಂಚಿಕೊಂಡಿದ್ದಾರೆ.

'ಬ್ರೂಸ್ ನಿಜಕ್ಕೂ ಅದ್ಭುತ. ಅಂದು ತುಂಬಾ ಚೆನ್ನಾಗಿಯೇ ಹಾರಿತು. ನಾನು ಕುಳಿತಿದ್ದರಿಂದ ಅದು ಸ್ವಲ್ಪವೂ ವಿಚಲಿತವಾಗಲಿಲ್ಲ. ಅದಾಗ್ಯೂ ನಾನಿದ್ದ ಸ್ಥಳದಿಂದ ಕೆಲ ಇಂಚು ದೂರದಲ್ಲಿ ತಂಗಾಳಿಯನ್ನು ಆಸ್ವಾದಿಸುತ್ತಾ ಹಾರಿತ್ತು. ಆ ಕ್ಷಣ ನನಗೆ ತುಂಬಾ ಸಂತೋಷ ನೀಡಿತು' ಎಂದಿದ್ದಾರೆ.

ವೃತ್ತಿ ಆರಂಭಿಸಿದ 10 ವರ್ಷದ ಬಳಿಕ ಸ್ಟೀವ್‌ಗೆ ವಿಶ್ವದೆಲ್ಲೆಡೆಯಿಂದ ಅಪಾರ ಮೆಚ್ಚುಗೆ ಸಿಕ್ಕಿದೆ. ಅಭಿನಂದನೆಯ ಮಹಾಪೂರವೇ ಹರಿಯುತ್ತಿದೆ. 'ನನ್ನ ಫೋಟೊಗ್ರಫಿ ಮುಂದೊಂದು ದಿನ ವಿಶ್ವದ ಗಮನಸೆಳೆಯುತ್ತದೆ ಹಾಗೂ ಬೆಲೆಕಟ್ಟಲಾಗದ ಆಸ್ತಿಯಾಗುತ್ತದೆ ಎಂದು ಭಾವಿಸಿರಲಿಲ್ಲ' ಎಂದಿರುವ ಅವರಿಗೆ 'ಪ್ರಕೃತಿಯೊಡನೆ ಕಾಲ ಕಳೆಯುವುದು, ಅದರ ಸೌಂದರ್ಯವನ್ನು ಕ್ಯಾಮೆರಾ ಕಣ್ಣಲ್ಲಿ ಬಂಧಿಸುವುದು ಇಷ್ಟವಂತೆ.

ಸ್ಟೀವ್, ಬೇಸಿಕ್ ಫೋಟೊಗ್ರಫಿ ತರಬೇತಿ ಪಡೆದಿದ್ದಾರೆ ಅಷ್ಟೇ. ಹಲವಾರು ಫೋಟೊಗ್ರಫಿ ಸೆಮಿನಾರ್‌ಗಳಿಗೆ ಹೋಗಿ, ಫೋಟೊಗ್ರಫಿಯಲ್ಲಿ ತೊಡಗಿಕೊಂಡೇ ಸಾಕಷ್ಟು ಅರಿತರಂತೆ. ಅವರಿಗೆ ಪ್ರಕೃತಿಯೆಂದರೆ ತುಂಬಾ ಇಷ್ಟವಂತೆ. ಜೊತೆಗೆ ಆಸ್ಟ್ರೊಫೋಟೊಗ್ರಫಿಯೂ. ■